**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 16/09/2025**

**ಅಸಲು ದಾವೆ.ನಂ..***270/2020*

ಪಿ.ಡಬ್ಲ್ಯೂ-*1*

(ಪಾಟೀ ಸವಾಲು ಶ್ರೀ ಜಿ.ಡಿ.ಎಂ. **in behalf of RR** ವಕೀಲರಿಂದ ಪ್ರತಿವಾದಿಯರ ಪರವಾಗಿ )

ಸದರಿ ದಾವೆಯನ್ನು ನಾನೇ ಹೇಳಿ ಹಾಕಿಸಿರುತ್ತೇನೆ. ಪ್ರತಿವಾದಿಯರು ಮತ್ತು ನಮ್ಮ ಮಾವ ಸ್ವಂತ ಅಣ್ಣತಮ್ಮಂದಿರು. ನನ್ನ ತಂದೆಯ ಅಣ್ಣ ತಮ್ಮಂದಿರು ಒಟ್ಟು 5 ಜನ. ಮಾದಲನೆಯರು ತಿರುಮಲ ಶೆಟ್ಟರಲು, ನಮ್ಮ ತಂದೆ ದಾಸಪ್ಪ ಶೆಟ್ಟಿ, 3ನೆಯವರು ಹನುಮಂತ ಶೆಟ್ಟಿ, 4ನೆಯವರು ರಂಗಶೆಟ್ಟಿ 5ನೆಯವರು ಕೃಷ್ಣ ಶೆಟ್ಟಿ ಪ್ರತಿವಾದಿಯ ಗಂಡನ ಹೆಸರು ನರಸಿಂಹ ಶೆಟ್ಟಿ ಅವರಿಗೆ ಒಡಹುಟ್ಟಿದವರು. 4 ಜನ. ಮೊದಲನೆಯವರು ವೆಂಕಟಸ್ವಾಮಿ, 2ನೆಯವರು ಬಸವಶೆಟ್ಟಿ, 3ನೆಯವರು ಗುಂಡ ಶೆಟ್ಟಿ, 4ನೆಯವರು ಅಶೋಕ. ಸದರಿಯವರೆಲ್ಲರೂ ಅವಿಭಕ್ತ ಕುಟುಂಬದಲ್ಲಿ ವಾಸ ಮಾಡುತ್ತಿದ್ದರು. ದಾವಾ ಆಸ್ತಿಯನ್ನು ನನ್ನ ತಾತನವರು ನನ್ನ ತಂದೆಗೆ ಕೊಟ್ಟ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ಪೂರ್ವ ಪಶ್ಚಿಮ 24 ಅಡಿ, ಉತ್ತರ ದಕ್ಷಿಣ 6 ಅಡಿ ವಿಸ್ತೀರ್ಣ ಹೊಂದಿರುತ್ತದೆ. ಸದರಿ ಆಸ್ತಿಯು ನನ್ನ ತಾಯಿ ಪೌತಿ ಆದ ನಂತರ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ. ಇದಕ್ಕೂ ಮೊದಲು ಸದರಿ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿತ್ತು. ದಾವಾ ಆಸ್ತಿಯಲ್ಲಿ ಹಳೆಯ ಮನೆ ಇದೆ. ಸದರಿ ಮನೆಗೆ ಒಂದ ಬಾಗಿಲಿದ್ದು, ಸದರಿ ಮನೆಯಲ್ಲಿಯೇ ಅಂಗಡಿ ಇದೆ. ಸದರಿ ದಾವೆಯಲ್ಲಿ ಸದರಿ ಮನೆಗೆ ವ್ಯವಹಾರದ ಅಂಗಡಿ ಇದೆ ಎಂಬುದನ್ನು ನಮೂದಿಸಲಾಗಿದೆಯೇ ಎಂದರೆ ಇಲ್ಲ. ನಿಶಾನೆ ಪಿ-2 ರಂತೆ ದಕ್ಷಿಣಕ್ಕೆ ಬಹುತ್ವದ ಓಣಿ ಇದೆ ಸರಿ. ಅದೇ ರೀತಿ ಉತ್ತರಕ್ಕೆ ಬಹುತ್ವದ ಓಣಿ ಇದೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸದರಿ ಮನೆಯ ಉತ್ತರಕ್ಕೆ ನಮಗೆ ಓಡಾಡಲು ಬಾಗಿಲು ಇದೆ ಎಂದರೆ ಸರಿ. ಆದರೆ ನಾವು ಹೆಚ್ಚಾಗಿ ಸದರಿ ಬಾಗಿಲನ್ನು ಓಡಾಡಲು ಬಳಸುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಾಗಿಲಿನಿಂದ ನಮಗೆ ಓಡಾಡಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ನಾವು ಹೆಚ್ಚಾಗಿ ಓಡಾಡುವುದಿಲ್ಲವೆಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿ ಮನೆಯ ಪಶ್ಚಿಮಕ್ಕೆ ಹನುಮಂತ ಶೆಟ್ಟಿರವರ ಮನೆ ಇದೆ ಎಂದರೆ ಸರಿ. ಸದರಿ ಹನುಮಂತ ಶೆಟ್ಟಿರವರು ನಮಗೆ ಸಂಬಂಧಿಕರು. ಪೂರ್ವಕ್ಕೆ ಬೆಳವಾಡಿಗೆ ಹೋಗುವ ರಸ್ತೆ ಇದೆ. ಪೂರ್ವಕ್ಕೆ ಅಂಗಡಿ ಮಳಿಗೆ ಇದೆ. ಸದರಿ ಮನೆಯಲ್ಲಿಯೇ ಅಂಗಡಿ ಮಳಿಗೆಯನ್ನು ಸಹ ಮಾಡಲಾಗಿದೆ. ಅಂಗಡಿ ಮಳಿಗೆಯಿಂದನಮಗೆ ಓಡಾಡಲು ತೊಂದರೆ ಇದೆ. ದಿಃ 24.12.1912ರಲ್ಲಿ ನನ್ನ ದಾಸ ಶೆಟ್ಟಿಯವರು ವೆಂಕಟಸ್ವಾಮಿರವರಿಗೆ ದಾವಾ ಆಸ್ತಿಯ ಬಗ್ಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ಪತ್ರದನ್ವಯ

ಪೂರ್ವಕ್ಕೆ ತಟುವಾಳು ರಸ್ತೆ ಎಂದು ನಮೂದು ಇದೆ ಎಂದರೆ ಸರಿ. ಪಶ್ಚಿಮಕ್ಕೆ ವೀರಭದ್ರೇಶ್ವರವರ ಹಿತ್ತಲು ಇದೆ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ನಮ್ಮದೇ ಜಾಗ ಎಂದು ಸದರಿ ಹಕ್ಕು ಖುಲಾಸೆ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಶಾನೆ ಪಿ–6 ತೋರಿಸಿ ಸದರಿ ನಿಶಾನೆಯಲ್ಲಿ ಪಿಟ್ಟು ಗುಂಡಿ ಇದೆ ಎಂದರೆ ಸಾಕ್ಷಿಯು ಅದು ಬಹುತ್ವದ ಓಣಿ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸದರಿ ಪಿಟ್ಟು ಗುಂಡಿಯ ಕಡೆಗೆ ಬಾಗಿಲನ್ನು ತೆರೆಯಲಾಗಿದೆ ಎಂದರೆ ಸರಿಯಲ್ಲ. ನಿಶಾನೆ ಪಿ–8 ರಂತೆ ಸದರಿ ಜಾಗ ಪ್ರತಿವಾದಿಯರಿಗೆ ಸೇರಿದ ಜಾಗ ಎಂದರೆ ಸಾಕ್ಷಿಯು ಅದು ಬಹುತ್ವದ ಓಣಿ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.ನಾವು ದಕ್ಷಿಣದ ಕಡೆಯ ಬಾಗಿಲಿನಿಂದಲೂ ಸಹ ಓಡಾಡಬಹುದು ಆದರೂ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆಯನ್ನು ಹೂಡಿರುವೆನೆಂದರೆ ಸರಿಯಲ್ಲ. ಅದೇ ರೀತಿ ಉತ್ತರದ ಬಾಗಿಲ ಕಡೆಯಿಂದಲೂ ಒಡಾಡಹುದು ಎಂದರೆ ಸರಿಯಲ್ಲ. ಪೂರ್ವದ ಕಡೆಯಿಂದಲೂ ನಾವು ಒಡಾಡಬಹುದು ಎಂದರೆ ಅಲ್ಲಿ ಅಂಗಡಿ ಇದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯ ಮನೆಯಲ್ಲಿ ಅಂಗಡಿ ಮಳಿಗೆ ಇದೆ ಎಂಬುದುಕ್ಕೆ ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಲಾಗಿದೆಯೇ ಎಂದರೆ ಇಲ್ಲ. ಬೇಕಾದರೆ ಹಾಜರುಪಡಿಸುತ್ತೇನೆ. ಸದರಿ ಅಂಗಡಿ ಮಳಿಗೆ ಇದ್ದಿದ್ದರೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸುತಿದ್ದೀರಿ ಎಂದರೆ ಅಂಗಡಿ ಇದೆ ದಾಖಲಾತಿ ಹಾಜರುಪಡಿಸುತ್ತೇನೆ. ಸದರಿ ಅಂಗಡಿಯ ಮಳಿಗೆಯ ವಿಚಾರವಾಗಿ ಇಂದೇ ನ್ಯಾಯಾಲಯದಲ್ಲಿ ಹೇಳುತ್ತಿರುವುದು ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಪ್ರತಿವಾದಿಯರೇ ಅನುಭವಿಸುತ್ತಿದ್ದು, ನಾನು ಸುಳ್ಳು ದಾವೆಯನ್ನು ಹೂಡಿ ಅವರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.

O.S. 270/2020

PW- 1